## ಅಧ್ಯಾಯ : ಎರಡು chapter-2

# ಕ್ರಿಯಾತ್ಮಕ ಗೀತೆಗಳ ಹುಟ್ಟು ಮತ್ತು ಬೆಳವಣಿಗೆ

**ಪೀಠಿಕೆ :**

ಜನಪದ ಗೀತೆ ಸಾಹಿತ್ಯ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಅವುಗಳನ್ನೇ ಹಳ್ಳಿಯ ಹಾಡುಗಳೆಂದೂ ಜಾನಪದ ಗೀತೆಗಳೆಂದೂ, ಇಂದು ಪರಿಗಣಿಸಲಾಗುತ್ತಿದೆ. ಇವು ಕಟ್ಟುನಿಟ್ಟಾದ ತರಬೇತಿಗೊಳಪಡದೆ ಬಾಯಿಂದ ಬಾಯಿಗೆ ಹರಡುತ್ತ ಬಂದಿವೆ. ಜನಪದ ಗೀತೆ ಕಾಲದಿಂದ ಕಾಲಕ್ಕೆ ಹರಡುತ್ತಾ ಹೋದಂತೆ ಅದರ ಮೂಲ ರಚನಾಕಾರನಾಗಲಿ, ಅದನ್ನು ಕಟ್ಟಿದವನನ್ನಾಗಲಿ ಮರೆತು ಹೊಸತನದ ಮೂಲಕ ಇಂದಿಗೂ ನಮ್ಮಲ್ಲಿ ಹಳೆಯ ಸಂಸ್ಕೃತಿಯನ್ನು ನೆನಪಿಸುವಲ್ಲಿ ಸಹಾಯಕಾರಿಯಾಗಿವೆ. ಜನಪದ ಸಂಸ್ಕೃತಿ ಹೇಗೆ ನಗರ ಸಂಸ್ಕೃತಿಗಿಂತ ಭಿನ್ನವಾಗಿದೆಯೋ ಹಾಗೆ ಜನಪದ ಗೀತೆ ಶಿಷ್ಟಕಾವ್ಯಕ್ಕಿಂತ ಭಿನ್ನವಾಗಿದೆ. ಕಾರಣ ಭಾವನೆಗಳು ಧಾರ್ಮಿಕ, ಮಾಂತ್ರಿಕ, ಕಾಯಕ, ಕ್ರೀಡಾ, ನಾಟ್ಯ, ಶಿಶುಗೀತೆ, ಗಂಡಸರ ಹಾಡುಗಳು, ಹೆಂಗಸರ ಹಾಡುಗಳು ಮನರಂಜನಾ ಮತ್ತು ಭಾವಾಭಿವ್ಯಕ್ತಿ ಹಾಡುಗಳು ಕ್ರಿಯಾತ್ಮಕತೆಯನ್ನು ಬಿಂಬಿಸುತ್ತವೆ.

ಜನಪದರ ಬದುಕಿನಲ್ಲಿ ಬೆಳೆದು ಬಂದ ಗೀತೆಗಳನ್ನು ಅವರು ಎಂದಿಗೂ ವಿಭಾಗಿಸಿಕೊಂಡವರಲ್ಲ. ಅವರ ನಡೆ-ನುಡಿಗಳಲ್ಲಿ ಬಳಕೆಯಾದ ಗೀತೆಗಳನ್ನೇ ಇಂದಿಗೂ ವಿದ್ವಾಂಸರು ಜನಪದ ಗೀತೆಗಳೆಂದು ಪರಿಗಣಿಸಿ ಅದನ್ನೇ ತಮ್ಮ ಅಧ್ಯಯನದ ಅನುಕೂಲಕ್ಕಾಗಿ ವಿಭಜಿಸಿಕೊಂಡಿದ್ದಾರೆ.

ಮೂಲದಲ್ಲಿ ಜನಪದ ಗೀತೆಗಳನ್ನು ರಚಿಸುವ ಮತ್ತು ಹಾಡುವ ವಿಷಯಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಅಭಿವ್ಯಕ್ತಪಡಿಸುವ ಕ್ರಮಬದ್ಧತೆ ಹಲವು ಸಂದರ್ಭದಲ್ಲಿ ವ್ಯವಸ್ಥಿತವಾಗಿ ಕಾಣಸಿಗುವದುಂಟು. ಅವು ಕೇಳುವದರಿಂದಲೇ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಸಾಗುತ್ತ ಬರುತ್ತಿವೆ. ನಗರ ಜನಸಮೂಹದ ಜೀವನಶೈಲಿ ತೀವ್ರಗತಿಯಲ್ಲಿ ಬದಲಾಗುತ್ತಿರುವುದರಿಂದ ಒಂದು ದೇಶದ ಪ್ರಾಚೀನ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಳ್ಳಲು ಇಂದು ಪ್ರಯತ್ನಿಸುವದು ಆವಶ್ಯಕವಾಗಿದೆ. ಹೀಗಾಗಿ ನಗರ ಸಂಸ್ಕೃತಿಯಿಂದ ಭಿನ್ನವಾದ ಹಳ್ಳಿಯ ಜನಸಮೂಹ ತನ್ನ ಕುರುಹುಗಳಲ್ಲೊಂದಾದ ಜನಪದ ಗೀತೆಗಳ ಮೂಲಕ ಪ್ರಾಚೀನ ಸಂಸ್ಕೃತಿಯನ್ನು ಉಳಿಸಿ, ಬೆಳೆಸಲು ತಿಣುಕುತ್ತಿವೆ.

ಸಂಸ್ಕೃತಿ ಎಂಬ ಮರಕ್ಕೆ ಸಾಮಾನ್ಯ ಜನತೆ ನೀರೆರೆಯುವದರಿಂದ ಅವರೇ ಆ ಸಂಸ್ಕೃತಿಯ ಜೀವನಾಡಿ ಅಥವಾ ತಾಯಿಬೇರುಗಳಾಗಿ, ಸಹಜ ಸುಂದರ ಗೇಯತೆಯನ್ನು ಕಾಯಕದ ಮಹಿಮೆಯ ಮೂಲಕ ಸೊಗಸಾಗಿ ಚಿತ್ರಿಸುವ ಜನಪದ ಗೀತೆಯೇ ಕ್ರಿಯಾತ್ಮಕ ಗೀತೆಗಳಾಗಿವೆ.

**ಕ್ರಿಯಾತ್ಮಕ ಜನಪದ ಗೀತೆಗಳ ಹುಟ್ಟು ಮತ್ತು ಬೆಳವಣಿಗೆ :**

ಕ್ರಿಯಾತ್ಮಕ ಜನಪದ ಗೀತೆಗಳ ಹುಟ್ಟುಗಳ ಕುರಿತಾಗಿ ನಿಖರವಾಗಿ ಹೇಳಲಾಗುವುದಿಲ್ಲವಾದರೂ ವಿದ್ವಾಂಸರ ಅಭಿಪ್ರಾಯವನ್ನು ಪರಿಗಣಿಸಿ ಹಾಗೂ ಜಾನಪದ ವಕ್ತೃಗಳ ಮಾಹಿತಿಯೊಂದಿಗೆ ಜನಪದ ಕ್ರಿಯಾತ್ಮಕತೆಗಳ ಕುರಿತಾಗಿ ಒಂದು ಖಚಿತತೆಯನ್ನು ಕಾಣಬಹುದುದಾಗಿದೆ. ಮಾನವನ ಮಾತುಗಳು ಮೂಲತಃ ಲಯಾತ್ಮಕವಾಗಿ ಹಾಗೂ ಕ್ರಿಯಾತ್ಮಕವಾಗಿದ್ದವು ಎನ್ನುವುದನ್ನು ಇಂದು ಉಳಿದು ಬಂದಿರುವ ಕೃಷಿ ಚಟುವಟಿಕೆಗೆ ಸಂಬಂಧಿಸಿದ ಹಾಡುಗಳೇ ಅದರ ಪಳಯುಳಿಕೆಗಳಾಗಿವೆ. ''ಲಯಾತ್ಮಕ ಮಾತುಗಳನ್ನೇ ಭಾವನಾತ್ಮಕವಾಗಿ ಹೇಳಲು ಹೊರಟಾಗ ಜನಪದ ಗೀತೆಗಳ ಉಗಮವಾಯಿತು.''[೧]

ಜನಪದ ಗೀತೆಗಳು ಯಾವಾಗ, ಯಾರಿಂದ ಹುಟ್ಟಿದವು ಎಂಬ ಪ್ರಶ್ನೆಗೆ ಖಚಿತವಾದ ಉತ್ತರ ಹೇಳುವುದು ಕಷ್ಟ. ಅವು ಅನಕ್ಷರಸ್ಥ ಸಮಾಜದಲ್ಲಿ ವಾಕ್‌ಪರಂಪರೆಯಲ್ಲಿ ಹುಟ್ಟಿ ಬೆಳೆದು ಬಂದವು ಎಂಬುದು ಸಾಮಾನ್ಯ ತಿಳುವಳಿಕೆ. ಅಷ್ಟೇ ಅಲ್ಲ ಅನಂತ ಕಾಲದಿಂದಲೂ ಅವು ಮಾನವ ಸಂಸ್ಕೃತಿಯ ಅಂಗವಾಗಿ ಉಳಿದು ಬೆಳೆದು ಬಂದಿವೆ ಎಂದು ಹೇಳಲು ಸಾಕಷ್ಟು ಆಧಾರಗಳಿವೆ. ಶಿಷ್ಟ ಕವಿಗಳು ತಮ್ಮ ಕಾವ್ಯರಚನೆಗೆ ಜನಪದ ಕಾವ್ಯದ ಛಂದೋರೂಪಗಳಾದ ತ್ರಿಪದಿ, ಷಟ್ಪದಿ ಮತ್ತು ರಗಳೆಗಳನ್ನು ಬಳಸಿಕೊಂಡಿರುವು ಸುಸ್ಪಷ್ಟವಿದೆ. ತ್ರಿಪದಿಯಬಳಕೆ ಕ್ರಿ.ಶ. ೭ನೆಯ ಶತಮಾನದ ಹೊತ್ತಿಗಾಗಲೇ ಕಪ್ಪೆ ಅರಬಟ್ಟನ ಶಾಸನದಲ್ಲಿ ಕಾಣಿಸಿಕೊಂಡಿದೆ. ಮತ್ತೊಂದು ಪ್ರಸಿದ್ಧ ಛಂದೋರೂಪವಾದ ರಗಳೆಯನ್ನು ಹರಿಹರ ಬಳಸಲು ಸ್ಫೂರ್ತಿ ಪಡೆದದ್ದು ಜನಪದ ಕಾವ್ಯದಿಂದಲೇ ಎಂಬುದು ವಿದ್ವಾಂಸರ ಅಭಿಪ್ರಾಯ. ಅಪೂರ್ವ ಜನಪದ ಗೀತೆಗಳ ಉಲ್ಲೇಖ ಶಿಷ್ಟ ಸಾಹಿತ್ಯದಲ್ಲಿ ಕಾಣಿಸಿಕೊಂಡಿದೆ. 'ಒನಕೆವಾಡು' ಸುಮಾರು ಎಂಟನೇ ಶತಮಾನದಿಂದಲೇ ಪ್ರಚಲಿತದಲ್ಲಿತ್ತು ಎಂಬುದಕ್ಕೆ ಶಾಸನಾಧಾರವಿದೆ. ಶಿವಮಾರನ 'ಗಜಾಷ್ಟಕ' ಕನ್ನಡದಲ್ಲಿ 'ಓವನಿಗೆ' ಯು ವನಕೆವಾಡು ಆಗಿತ್ತು ಎಂದು ತಿಳಿದುಬರುತ್ತದೆ. ಧವಲದ ಹಾಡುಗಳು ಸೋಮೇಶ್ವರನ 'ಮಾನಸೋಲ್ಲಾಸ', ಹೇಮಚಂದ್ರನ 'ಛಂದೋನುಶಾಸನ', ಶಾರ್ಙ್ಗದೇವನ 'ಸಂಗೀತ ರತ್ನಾಕರ' ಗಳಲ್ಲಿ ಉಲ್ಲೇಖಗೊಂಡಿರುವುದಲ್ಲದೆ, ರನ್ನ,

೧. ಜನಪದ ಸಾಹಿತ್ಯದ ಮೂಲತತ್ವಗಳು, ಪು. ೧೫, ಆರ್. ಎಸ್. ಸುಂದರಂ.

ರಾಘವಾಂಕ, ರತ್ನಾಕರವರ್ಣಿ ಮುಂತಾದ ಕವಿಗಳ ರಚನೆಯಲ್ಲೂ ಅವುಗಳ ಪ್ರಸ್ತಾಪವಿದೆ. ಶಿವಕೋಟ್ಯಾಚಾರ್ಯರ 'ವಡ್ಡಾರಾಧನೆ'ಯಲ್ಲಿ ನಯಸೇನ,ರಾಘವಾಂಕರ ರಚನೆಗಳಲ್ಲಿ, ನೇಮಿಚಂದ್ರನ 'ಲೀಲಾವತಿ' ಕಾವ್ಯದಲ್ಲಿ ಜನಪದ ಕಥೆಗಳ ಸ್ವೀಕರಣ ಹೇರಳವಾಗಿ ನಡೆದಿದೆ. ಈ ದೃಷ್ಟಾಂತಗಳು ಜನಪದ ಕಥೆಗಳು ಮತ್ತು ಕಾವ್ಯಗಳು ಶಿಷ್ಟ ಕವಿಗಳ ಮೇಲೆ ಹಿಂದಿನಿಂದಲೂ ಪ್ರಭಾವ ಬೀರುತ್ತ ಬಂದಿರುವುದಕ್ಕೆ ಸಾಕ್ಷಿಯಾಗಿವೆ. 'ಸ್ವೀಕರಣದ ದೃಷ್ಟಿಯಿಂದಲೂ ತಮ್ಮ ಕಾವ್ಯದ ಪ್ರತಿಷ್ಠೆಯನ್ನು ಸ್ಥಾಪಿಸುವ ದೃಷ್ಟಿಯಿಂದಲೂ ಜನಪದ ಕಾವ್ಯ ಶಿಷ್ಠ ಕವಿಗಳ ದೃಷ್ಟಿಗೆ ಆಗಾಗ ಬಿದ್ದಿದ್ದರೂ ಅದು ಅಜ್ಞಾತವಾಗಿಯೇ ಉಳಿದು ಬಂದಿತು'. ಅಶಿಕ್ಷಿತ ಗ್ರಾಮೀಣ ಜನಸಮುದಾಯ ಅದಕ್ಕೆ ಆಶ್ರಯ ನೀಡಿತು. ದುಡಿಮೆಯ ಶ್ರಮದ ಉಪಶಮನಕ್ಕಾಗಿ ಜೀವನ ಶಿಕ್ಷಣಕ್ಕಾಗಿ ಸಂಸ್ಕೃತಿಯ ರಕ್ಷಣೆಗಾಗಿ ಇನ್ನೂ ಹಲವು ಉದ್ದೇಶಗಳಿಗಾಗಿ ಜನಪದ ಗೀತೆ ಇವರಿಗೆ ಬೇಕಾಯಿತು. ಕ್ರಮೇಣ ಅದು ಅವರ ಬದುಕಿನ ಸಾರವನ್ನೇ ಹೊರಹೊಮ್ಮಿಸುವ ಸಾಧನವಾಗಿ ಉಳಿಯಿತು.

ಕರ್ನಾಟಕದಲ್ಲಿ ಕಳೆದ ಶತಮಾನದಿಂದಲೇ ಜಾನಪದ ಅಧ್ಯಯನ ಆರಂಭಗೊಂಡಿತಾದರೂ, ಜಾನಪದದ ಸಮಗ್ರ ಕಲ್ಪನೆ ಮೂಡಿದುದು ಇತ್ತೀಚೆಗೆ. ಆರಂಭಿಕ ದಿನಗಳಲ್ಲಿ ಜಾನಪದವೆಂದರೆ ಬರಿ ಜನಪದ ಗೀತೆಗಳಷ್ಟೇ ಎಂಬ ತಿಳುವಳಿಕೆ ಮಾತ್ರ ಇದ್ದು, ಆ ಕ್ಷೇತ್ರದಲ್ಲಷ್ಟೇ ಕೆಲಸ ನಡೆಯುವಂತಾಯಿತು. ಕ್ರಿಯಾತ್ಮಕ ಜನಪದ ಗೀತೆಗಳ ಕುರಿತು ಸಾಕಷ್ಟು ಅಧ್ಯಯನ ಇನ್ನೂ ನಡೆಯಬೇಕಾಗಿರುವ ಹಿನ್ನೆಲೆಯಲ್ಲಿ ಕ್ರಿಯಾತ್ಮಕ ಜನಪದ ಗೀತೆಗಳೆಂದರೆ ಲಯ ಮತ್ತು ಭಾವನೆಗಳ ಅಭಿವ್ಯಕ್ತಿಗಳಾಗಿವೆ. ಭಾವನೆಗಳ ದುಃಖದೊಂದಿಗೆ ಹೃದಯದ ಬಡಿತ-ಮಿಡಿತವನ್ನು ಬೇರೊಬ್ಬರಿಗೆ ತಿಳಿಯದಂತೆ ತನ್ನ ದುಃಖ, ದುಮ್ಮಾನಗಳನ್ನು ತೋಡಿಕೊಳ್ಳಲು ಬಳಸಿದ ಕ್ರಿಯೆಯನ್ನೇ ನಾವು ಜನಪದ ಕ್ರಿಯಾತ್ಮಕ ಗೀತೆಗಳೆಂದು ವಿಭಾಗಿಸಿಕೊಂಡಿದ್ದೇವೆ. ಮೂಲತಃ ಮಾನವನು ಬೆಟ್ಟ-ಗುಡ್ಡಗಳಲ್ಲಿ ನೆಲೆಸುವಾಗ ಆಹಾರಕ್ಕಾಗಿ ಬೇಟೆಯಾಡುವಾಗ ನಂತರ ಅದನ್ನು ಸುಟ್ಟೋ ಇಲ್ಲವೆ ಹಸಿಯಾಗಿ ತಿನ್ನುವಾಗ, ಸಂತೋಷದಿಂದಲೋ, ಸಂಕಟದಿಂದಲೋ ಅವನಾಡಿದ ಮಾತುಗಳೇ ಕ್ರಿಯಾತ್ಮಕತೆಯ ಮೂಲವಾಗಿವೆ. ಇಂತಹ ಲಯಾತ್ಮಕ ಮಾತುಗಳೇ ಮುಂದೆ ಪರಿವರ್ತನೆಯಾಗಿ ಹಾಡುಗಳಾಗಿವೆ. ಅಂದಿನ ಮಾನವ ತನ್ನ ಸುಖದುಃಖಗಳನ್ನು ಅತಿಮಾನುಷ ಶಕ್ತಿಗಳಿಗೆ ಹೇಳಿಕೊಳ್ಳುವಾಗಲೂ, ಗೀತೆಗಳು ಉಗಮವಾಗಿರಬೇಕು ಎಂದರೆ ಕೆಲಸದ ಹಾಡುಗಳು ಪರಮಾರ್ಥ ಗೀತೆಗಳು ಒಂದೇ ಕಾಲದಲ್ಲಿ ಉಗಮವಾದವೆಂದು ಹೇಳಬಹುದಾದರೂ ಅತಿಮಾನಷ ಶಕ್ತಿಗಳಿವೆ ಎಂಬ ಭಾವನೆ ಮಾನವನಿಗೆ ಉಂಟಾಗುವ

ಮೊದಲೇ ಜನಪದ ಗೀತೆಯ ಪ್ರಾಥಮಿಕ ರೂಪ ಉಗಮವಾಗಿರಬೇಕು.[೨] ಆದರಂತೆಯೇ ಮಾನವ ಭಾವೋತ್ಕರ್ಷದ ಮತ್ತು ಸಹಜ ಚಟುವಟಿಕೆಗಳ ಪರಿಣಾಮವಾಗಿ ಗೀತೆಗು ಉದಯವಾಗಿರಬಹುದು. ಅವನ ಅನುಭವಕೋಶ ಹಿಗ್ಗಿ ಜ್ಞಾನ ಪ್ರಪಂಚ ವಿಶಾಲವಾದಂತೆಲ್ಲ ಅವುಗಳ ಗುಣ, ಗಾತ್ರ, ವೈವಿಧ್ಯಗಳು ವೃದ್ಧಿ ಹೊಂದಿದವು[೩] ಎಂಬ ಅಭಿಪ್ರಾಯಗಳು ಇದಕ್ಕೆ ಪೂರಕವಾಗಿವೆ.

ಜನಪದ ಗೀತೆಗಳು ಹೆಚ್ಚಾಗಿ ಕ್ರಿಯಾತ್ಮಕವಾದವುಗಳಾಗಿವೆ. ಮಾನವನು ತನ್ನ ಆಯಾಸವನ್ನು ಕಳೆದುಕೊಳ್ಳಲು ಕೆಲಸದ ಜೊತೆಗೆ ಹಾಡುತ್ತಿದ್ದನು. ಅಂತೆಯೇ ಆತ ಮಾಡುವ ಕ್ರಿಯೆಗೂ ಗೀತೆಗೂ ನೇರವಾದ ಸಾವಯವ ಸಂಬಂಧವೊದಗಿ ಗೀತೆಗಳೆಲ್ಲ ಕ್ರಿಯಾತ್ಮಕವಾದವು. ಕ್ರಿಯೆಗೆ ಗೀತ ಭೋದಕವಾದರೆ ಗೀತ ಸೃಷ್ಟಿಗೆ ಕ್ರಿಯೆಯಿಂದ ಸ್ಫೂರ್ತಿ ದೊರೆಯುವಂತಾಯಿತು. ಆದರೆ ಎಲ್ಲ ಗೀತೆಗಳು ಕ್ರಿಯಾತ್ಮಕವಾಗಿ ಹೊರಹೊಮ್ಮಿವೆ. ಆದರೆ ಮಾನವ ತನ್ನದೇ ಆದ ಧರ್ಮ, ದೈವ, ಜಾತ್ರೆ, ಉತ್ಸವ ಸಂದರ್ಭಗಳನ್ನು ಅವನು ಬಳಸಿಕೊಂಡಿದ್ದಾನೆ.

ಈ ಜನಪದ ಗೀತೆಗಳ ಕರ್ತೃ ಯಾರು? ಅವರ ಹೆಸರು, ಅವರ ಕಾಲ ಹಾಗೂಚ ದೇಶಾದಿಗಳು ಯಾವುವು? ಎಂದು ತಿಳಿದುಕೊಳ್ಳಲು ನಮಗೆ ಸಾಕಷ್ಟು ಆಧಾರಗಳಿಲ್ಲ. ಜನಪದ ಕವಿಗಳು ಅಹಮಿಕೆಯಿಲ್ಲದ ನಿರಪೇಕ್ಷಿಗಳಾಗಿದ್ದರಿಂದ ತಮ್ಮ ಹೆಸರು, ದೇಶ, ಕಾಲಾದಿಗಳ ವಿಷಯದಲ್ಲಿ ಏನನ್ನೂ ಹೇಳದೇ ಮೌನತಾಳಿದರು. ಆಧುನಿಕ ಸುಧಾರಣೆಯ ಗಾಳಿ ಬೀಸದ, ಸಾಮಾನ್ಯ ಸ್ತ್ರೀ ಪುರುಷರು ತಮಗೆ ಪರಿಚಯವಿದ್ದ ಯಾವುದೋ ಹಾಡಿನ ಮಟ್ಟವನ್ನು ಹಿಡಿದು, ತಮ್ಮ ಹೃದಯ ತುಂಬಿ ಬಂದಾಗ, ಯಾರ ಹೊಗಳಿಕೆ, ಬಿರುದು, ಬಾವಲಿಗಳನ್ನು ಅಪೇಕ್ಷಿಸದೇ ತಮ್ಮ ಆತ್ಮತೃಪ್ತಿಗಾಗಿ ಹಾಡುಗಳನ್ನು ಕಟ್ಟಿ ಹಾಡತೊಡಗಿದರು. ತಮ್ಮ ಹಿಂದಿನ ತಲೆ ಮಾರಿನವರು ಹಾಗೂ ಸಮಕಾಲೀನರು ಕಟ್ಟಿದಂತಹ ಹಾಡುಗಳನ್ನು ಸ್ಮರಣೆಯಲ್ಲಿಟ್ಟುಕೊಂಡು ಪ್ರೀತಿ-ಉತ್ಸಾಹದಿಂದ ಹಾಡಿದರು. ಮುಂಜಾವಿನಲ್ಲಿ ಎದ್ದು ಕಸಗುಡಿಸುವಾಗ, ಅಂಗಳವನ್ನು ಸಾರಿಸಿ ರಂಗೋಲಿ ಹಾಕುವಾಗ, ಮೊಸರು ಕಡಿಯುವಾಗ, ಹಾಲು ಕರೆಯುವಾಗ, ಮಕ್ಕಳಿಗೆ ಮೊಲೆಯುಣಿಸುವಾಗ, ತೊಟ್ಟಿಲು ತೂಗಿ ಮಕ್ಕಳನ್ನು ಮಲಗಿಸುವಾಗ ಹೆಂಗಸರು ಹಾಡಿದರೆ, ಗಾಡಿ ಹೊಡೆಯುವಾಗ, ಗದ್ದೆ ಹೂಡುವಾಗ, ದೋಣಿಯ ಹುಟ್ಟು ಹಾಕುವಾಗ, ಏತ ಎತ್ತುವಾಗ, ಗಾಣ ಹೊಡೆಯುವಾಗ, ಬಣವಿಯನ್ನು ಒಟ್ಟುವಾಗ, ರಾಶಿ ಮಾಡುವಾಗ ಹಾಗೂ ಕಾಳು ತೂರಿ ಹಸನು ಗೊಳಿಸುವಾಗ ಗಂಡಸರು ಒಬ್ಬಂಟಿಯಾಗಿ

೨. ಜನಪದ ಸಾಹಿತ್ಯದ ಮೂಲತತ್ವಗಳು, ಪು. ೧೫, ಆರ್. ಎಸ್. ಸುಂದರಂ.
೩. ಜನಪದ ಗೀತಾಂಜಲಿ, ಪು.೨, ಡಾ. ದೇ. ಜವರೇಗೌಡ.

ಹಿಗ್ಗಿ ಹಾಡಿದರು. ಹೀಗೆ ಬರಬರುತ್ತ ಕಳೆಕೀಳುವಾಗ, ಸಸಿ ನೆಡುವಾಗ, ಹುಲ್ಲು ಕೊಯ್ಯುವಾಗ, ಕಾಳೊಕ್ಕುವಾಗ, ಭತ್ತ ಕುಟ್ಟುವಾಗ ಗುಂಪುಗೂಡಿ ಹಾಡತೊಡಗಿದರು.

ಜನಪದ ಗೀತೆಗಳ ಹುಟ್ಟು ಸಾಮೂಹಿಕವೋ, ವೈಯಕ್ತಿಕವೋ ಎನ್ನುವ ವಿಷಯದಲ್ಲಿ ಭಿನ್ನಾಭಿಪ್ರಾಯಗಳನ್ನು ಕಾಣುತ್ತೇವೆ.ಕಲೆಯೆಂಬುದು ವ್ಯಕ್ತಿ ಸೃಷ್ಟಿಯ ವಸ್ತು. ಅದು ಒಬ್ಬನ ಮನಸ್ಸನ್ನು ಹೇಳುತ್ತದೆ. ಅವನ ಮನಸ್ಸಿನಂತೆಯೇ ಮನಸ್ಸುಳ್ಳ ಸಾವಿರ ಜನರು ಇರಬಹುದಾದರೂ ಸೃಷ್ಟಿಕಾರ ಮಾತ್ರ ಒಬ್ಬನೆ. ಅವನ ಸೃಷ್ಟಿಯನ್ನು ಕಂಡಾಗ ನಾನು ಇದನ್ನೇ ಹೇಳುತ್ತಿದ್ದೆ, 'ನಾನು ಹೀಗೆಯೇ ಎಣಿಸಿದ್ದೆ' ಎಂದು ಹಲವರಿಗೆ ಅನಿಸಬಹುದು. ಹಾಗೆ ಅನಿಸುವುದರಿಂದಲೇ ಅದು ಜನಪ್ರಿಯವಾಗುತ್ತದೆ. ಒಬ್ಬ ವ್ಯಕ್ತಿಯ ಮನೋಭಾವ, ಕಲ್ಪನೆ, ಅನುಭವ ಮೊದಲಾದವುಗಳನ್ನು ಅವು ಹೊರಗೆಡಹುತ್ತದೆ. ಒಬ್ಬ ವ್ಯಕ್ತಿಯಲ್ಲಿ ಸುತ್ತಣ ಜೀವನದ ಸಂವೇದನೆಯಿಂದ ಅವು ಉದ್ರೇಕಗೊಳ್ಳುತ್ತವೆ.[೪] ಈ ಅಭಿಪ್ರಾಯದ ಪ್ರಕಾರ ಜನಪದ ಗೀತಗಳ ಸೃಷ್ಟಿ ಆರಂಭದಲ್ಲಿ ವೈಯಕ್ತಿಕವಾಗಿವೆ.

''ಹೀಗೆ ಅಕ್ಷರಸ್ಥ ಸಮಾಜದ ಸಾಹಿತ್ಯ ಸೃಷ್ಟಿ ವೈಯಕ್ತಿಕವೋ ಹಾಗೆಯೇ ಜನಪದ ಗೀತಗಳ ನಿರ್ಮಾಣ ತನ್ನ ಆರಂಭದಲ್ಲಿ ಸಾಮೂಹಿಕವಾಗಿದೆ. ಇವುಗಳ ನಿರ್ಮಾಣದಲ್ಲಿ ಯಾರು ಯಾವಾಗ ಹೇಗೆ ಭಾಗವಹಿಸಿದರು ಎಂದು ಹೇಳಲು ಬರುವುದಿಲ್ಲ. ಈ ಅಮರ ಗೀತೆಗಳು ಅಜ್ಞಾತ ಕವಿಗಳ ಸೃಷ್ಟಿಯಾಗಿದೆ. ಬಳಿಕೆಯಲ್ಲಿ ಮಾತ್ರ ವ್ಯಕ್ತಿಗತವಾಗುವುದು ಈ ಗೀತಗಳ ಮತ್ತೊಂದು ಮಹತ್ವದ ಅಂಶ. ಆಧುನಿಕ ಅರ್ಥದಲ್ಲಿ ಕವಿ ಗಮಿಕಿಯ ಮೂಲಕ ಸಹೃದಯನನ್ನು ಮುಟ್ಟುತ್ತಾನೆ. ಸಂಗೀತ ವಿಷಯದಲ್ಲಿದರೆ ರಚನೆಕಾರ, ಸಂಗೀತಗಾರನ ಮುಖಾಂತರ ಶ್ರಾವಕರನ್ನು ಮುಟ್ಟುತ್ತಾನೆ. ಜನಪದ ಗೀತಗಳ ವಿಚಾರದಲ್ಲಿ ಹೀಗಾಗದಿರುವುದು ಮೂರನೆಯ ಮಹತ್ವದ ಅಂಶವಾಗಿದೆ. ಇಲ್ಲಿ ಕಾವ್ಯ ಹಾಗೂ ಸಂಗೀತದ ಸಾರ್ಥಕತೆಯ ಮೂರು ಮಜಲಿನಲ್ಲಿಯೂ, ನಮಗೆ ಕಂಡುಬರುವುದು ಇಡೀ ಒಂದು ಗುಂಪು ಅಷ್ಟೇ. ಆ ಗುಂಪೇ ಸೃಷ್ಟಿಗೂ, ಪ್ರಸಾರಕ್ಕೂ ಆಸ್ವಾದನೆಗೂ ಕಾರಣ. ಬಹು ಸಂದರ್ಭಗಳಲ್ಲಿ ಈ ಗೀತಗಳ ರಚನೆಕಾರರು ಯಾರೆಂದು ತಿಳಿಯುವುದಿಲ್ಲ. ಕವಿಯ ಪ್ರತಿಭಾ ಮೂಸೆಯಲ್ಲಿ ಕಾವ್ಯ ಸೃಷ್ಟಿಯಾಗುವಂತೆ ಜನಪದ ಕಾವ್ಯ ಸೃಷ್ಟಿಯಾಗುವುದಿಲ್ಲ. ಜನಪದ ಕಾವ್ಯ ಬೆಳೆಯುತ್ತದೆ. ಸತತವಾಗಿ ಅದರ ಬದಲಾವಣೆ ನಡೆಯುತ್ತಾ ಹೋಗುತ್ತದೆ. ಒಟ್ಟಿನಲ್ಲಿ ಈ ನಿರ್ಮಾಣಕಾರ್ಯ ಒಬ್ಬನದಲ್ಲ.

---

೪. ಕಾರಂತರು, ಸುವರ್ಣ ಸಂಚಯ, ಪು. ೧೨೨-೧೨೩.

ಹಲವರದು, ಒಂದು ಗುಂಪಿನದು.''[೫] ಅಂತೂ ಈ ಗೀತಗಳು ಒಂದು ಗುಂಪಿನ ಜನರ ಸಾಮಾಹಿತ ಸೃಷ್ಟಿ.[೬] ಈ ಮೇಲಿನ ಅಭಿಪ್ರಾಯಗಳಿಗೆ ಸಂಬಂಧಿಸಿದಂತೆ ಜನಪದ ಗೀತಗಳು ಸಾಮೂಹಿಕ ಸೃಷ್ಟಿಯ ಫಲಗಳಾಗಿವೆ.

ಈ ಸಂದರ್ಭದಲ್ಲಿ ಎರಡೂ ಅಭಿಪ್ರಾಯಗಳನ್ನು ಓರೆಗೆ ಹಚ್ಚಿ ನೋಡುವುದು ಅತಿ ಅವಶ್ಯಕವೆನಿಸುತ್ತದೆ. ಈ ಜನಪದ ಗೀತಗಳ ಹುಟ್ಟು ಇತರ ಪಂಡಿತ ಕಾವ್ಯಗಳಂತೆ ವೈಯಕ್ತಿಕ ಜೀವನದಲ್ಲಿಯ ಸಾವು-ನೋವು, ರಾಗ-ದ್ವೇಷ, ಆಸರಿಕೆ-ಬೇಸರಿಕೆಗಳನ್ನು ಕಂಡ ಜನಪದ ಕವಿಗಳು ಏಕಾಂತದಲ್ಲಿದ್ದಾಗ ಭಾವತುಂಬಿದಾಗ ತಮ್ಮ ಅಂತರಂಗದಲ್ಲಿ ಕುದಿಯುತ್ತಿದ್ದ ಭಾವನೆಗಳಿಗೆ ಹಾಡುಗಳ ಮೂಲಕ ಅಭಿವ್ಯಕ್ತಿಯನ್ನು ನೀಡಿದರು. ಹಾಡಿದ ಹಾಡನ್ನೇ ಪುನಃ ಪುನಃ ಹಾಡಿ ಕಂಠಪಾಠ ಮಾಡಿ ತಮ್ಮ ಸುತ್ತಮುತ್ತಲಿನವರ ಮುಂದೆ ಹಾಡಿ ನಲಿದರು. ಈ ಸಂದರ್ಭದಲ್ಲಿ ಹಾಡು ವೈಯಕ್ತಿಕವೇ ವಿನಃ ಸಾಮೂಹಿಕವಲ್ಲ. ಈ ಕವಿಗಳು ಹಾಡುಗಳನ್ನು ಬರದಿಡದೇ ಇನ್ನೊಬ್ಬರ ಮುಂದೆ ಬರೆದರು. ಅವರಿಗೂ ಆ ಹಾಡು ಕಲಿಸಿಕೊಟ್ಟು, ಆ ಹಾಡುಗಳ ಮೇಲಿರುವ ತಮ್ಮ ವೈಯಕ್ತಿಕ ಒಡೆತನವನ್ನು ಬಿಟ್ಟುಕೊಟ್ಟರು.

ಆ ಹಾಡುಗಳು ಕರ್ಣಾನುಕರ್ಣವಾಗಿ ಸಾಗಿ ಅನೇಕರ ಸೊತ್ತಾದವು. ಒಬ್ಬನಿಂದ ಇನ್ನೊಬ್ಬನ ಕಿವಿಗೆ ಹಾಡುಗಳು ತಲುಪುವಾಗ ಈ ಹಾಡುಗಳು ಇದ್ದಂತಹ ಸ್ಥಿತಿಯಲ್ಲಿಯೇ ಸಾಗುತ್ತವೆಂದು ಹೇಳಲಾಗುವುದಿಲ್ಲ. ಅವು ಬದಲಾವಣೆಯನ್ನು ಹೊಂದಬಹುದು. ಹಾಡು ಕೇಳಿದ ವ್ಯಕ್ತಿಗಳು ತಮ್ಮ ಅಭಿರುಚಿ, ಸಂಸ್ಕಾರಗಳಿಗೆ ತಕ್ಕಂತೆ ಉದ್ದೇಶಪೂರ್ವಕವಾಗಿ ಬದಲಿಸಿಕೊಳ್ಳಬಹುದು. ಅಥವಾ ಕೇಳಿದ ವ್ಯಕ್ತಿಗಳ ವೈಯಕ್ತಿಕ ಶ್ರವಣದೋಷ ಇಲ್ಲವೇ ನಾಲಿಗೆಯ ದೋಷದಿಂದ ಹಾಡುಗಳು ಮಾರ್ಪಾಡು ಹೊಂದಬಹುದು. ಆಗ ಹಾಡು ಪ್ರಥಮದಲ್ಲಿ ಹುಟ್ಟಿಕೊಂಡಂತೆ ಇರದೇ ಅದು ರೂಪತಳೆದು ನಿಲ್ಲಬಹುದು. ಆ ಸಂದರ್ಭದಲ್ಲಿ ಹಾಡಿನ ವೈಯಕ್ತಿಕತೆ ಮಾಯವಾಗಿ ಅದು ಸಾಮೂರಿಕ ಸೃಷ್ಟಿಯ ಫಲವಾಗಿ ನಿಲ್ಲಬಹುದು.

ಹಲವು ಸಂದರ್ಭಗಳಲ್ಲಿ ಈ ಹಾಡುಗಳ ನಿರ್ಮಾಣ ಜನರ ಗುಂಪಿನಲ್ಲಿಯೇ ಆಗುವುದು. ಆದರೂ ಜನ ಸಮೂಹದ ಮಧ್ಯದಲ್ಲಿ ಈ ಹಾಡುಗಳ ಸೃಷ್ಟಿಯಾಗುವ ಕಾಲಕ್ಕೂ, ಪ್ರಥಮತಃ ಹಾಡು ಹುಟ್ಟುವದು ವೈಯಕ್ತಿಕವಾಗಿಯೇ ಆದರೆ ಆ ಸಂದರ್ಭದಲ್ಲಿ ಹಾಡು ಹೇಳುವ ವ್ಯಕ್ತಿಯ ಅಕ್ಕಪಕ್ಕದ ಜನರು ಹಾಡನ್ನು ಕೇಳಿದಾಗ ಆ ಹಾಡಿಗೆ ತಮ್ಮ ತಮ್ಮ ಧ್ವನಿಯನ್ನೇರಿಸಿ, ನಾಲ್ಕು ಸೊಲ್ಲನ್ನು ತಾವೂ ಸೇರಿಸಬಹುದು ಹಾಗೂ

---

೫. ಡಾ. ಹಾ. ಮಾ. ನಾಯಕ, ಸುವರ್ಣ ಸಂಚಯ, ಪು. ೨೭-೨೮.

೬. Encyclopaedia of Britanica, p. 446.

ತಿದ್ದಬಹುದು. ಆಗ ತಿದ್ದಿದ ಹಾಡು, ಹಾಡು ಕಟ್ಟಿದವನ ವೈಯಕ್ತಿಕ ಸೊತ್ತಾಗದೇ ಸಮೂಹದ ಸೊತ್ತಾಗುವುದು. ಒಟ್ಟಿನಲ್ಲಿ ಹೇಳುವುದಾದರೆ ಈ ಹಾಡುಗಳು ಉಗಮದಲ್ಲಿ ವೈಯಕ್ತಿಕ, ಪ್ರಸಾರದಲ್ಲಿ ಸಾಮೂಹಿಕ. ಈ ಹಾಡುಗಳು 'ವ್ಯಷ್ಟಿಯಿಂದ ಹುಟ್ಟನ್ನು ಪಡೆದು ಸಮಷ್ಟಿಯಿಂದ ಸಂಸ್ಕಾರಗೊಂಡು ಯಾರೊಬ್ಬರ ಸೊತ್ತೂ ಆಗದೇ ಎಲ್ಲರ ಮೆಚ್ಚಿನ ವಸ್ತುವಾಗಿ ಉಳಿಯುವ ಈ ಸಾಹಿತ್ಯ ಜನತೆಯ ಹೃದಯ ಸಂಸ್ಕಾರದಲ್ಲಿ ವಿಶಿಷ್ಟ ಪಾತ್ರವನ್ನೇ ವಹಿಸಿದ ಮಹಾ ಸಂಜೀವಿನಿ''[೭] It is an individual flowering on a common stem"[೮] ಎಂಬ ಅಭಿಪ್ರಾಯವು ತರ್ಕಸಮ್ಮತವಾದುದಾಗಿದೆ.

ಕ್ರಿಯಾತ್ಮಕ ಜನಪದ ಕಲೆಗಳನ್ನು ವಿದ್ವಾಂಸರು ತಮ ತಮಗೆ ಸರಿಕಂಡ ರೀತಿಯಲ್ಲಿ ವಿಂಗಡಿಸಿ ಅಧ್ಯಯನವನ್ನು ಮಾಡಿದ್ದಾರೆ. ಮಾನವನ ಮಾತುಗಳು ಮೂಲತಃ ಲಯಾತ್ಮಕ ಹಾಗೂ ಕ್ರಿಯಾತ್ಮಕವಾಗಿದ್ದವು ಎನ್ನುವುದಕ್ಕೆ ಇಂದು ಉಳಿದಂತಹ ಅವುಗಳ ಪಳಿಯುಳಿಕೆಗಳು ಸಾಕ್ಷಿಯಾಗಿವೆ. ''ಲಯಾತ್ಮಕ ಮಾತುಗಳನ್ನು ಭಾವನಾತ್ಮಕವಾಗಿ ಹೇಳಲು ಹೊರಟಾಗ ಜನಪದ ಗೀತೆಗಳು ಉಗಮವಾಯಿತು.''[೯] ಎಂಬ ಅಭಿಪ್ರಾಯ ಹೇಳಿರುವರು. ಮುಂದೆ ಮಾತೆ ಗೀತೆಯಾಯಿತು. ಇದಕ್ಕೆ ವ್ಯತಿರಿಕ್ತವಾಗಿ ''ಮಾತಿಗಿಂತ ಮುಂಚೆಯೇ ಹಾಡು ಹುಟ್ಟಿರಬೇಕು. ಆ ಹಾಡಿನ ಮೂಲಕವೇ ಮಾತು ಹೊರಹೊಮ್ಮಿರಬೇಕು.''[೧೦] ಮಾತು- ಗೀತ ಎರಡರಲ್ಲಿಯೂ ಯಾವುದು ಮೊದಲು ಎಂಬುದು ನಿರ್ಧರಿಸುವುದು ಅಷ್ಟು ಸುಲಭವಾದ ಕೆಲಸವಲ್ಲ. ಆದರೆ ಅವೆರಡೂ ಅವಿನಾಭಾವ ಸಂಬಂಧಹೊಂದಿ ಕ್ರಿಯೆಯಲ್ಲಿ ಜನಪದ ಗೀತ ಸಾಹಿತ್ಯ ಹುಟ್ಟಿರಬೇಕು. ಜನಪದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಮೊದಲು ಹುಟ್ಟಿಕೊಂಡು ಬಂದಿರುವುದು ಗೀತ ಸಾಹಿತ್ಯವಾಗಿದೆ. ಮನುಷ್ಯ ತನ್ನೊಳಗಿನ ಅನುಭವದ ಅಮೃತವನ್ನು ಹೊರಹಾಕಲು ಹಾಗೂ ಭಾವನೆಗಳನ್ನು ಸುಖ-ದುಃಖದ ಹೃದಯದ ಬಡಿತ, ಮಿಡಿತವನ್ನು ಹೊರ ಹಾಕಿ ಸಂತೋಷ ಪಡಲು ಅಥವಾ ಭಾರವನ್ನು ಇಳಿಸಲು ಪ್ರಯತ್ನಿದ ಧ್ವನಿಗಳೇ ಗೀತೆಗಳಾಗಿ ನಿಂತಿವೆ.

ಮೂಲತಃ ಮಾನವ ಕಾಡು, ಬೆಟ್ಟಗಳಲ್ಲಿ ವಾಸಿಸುತ್ತ ಅವನ ಆಹಾರಕ್ಕಾಗಿ ಬೇಟೆಯಾಡುತ್ತ ಅದನ್ನೇ ಮುಖ್ಯ ಉದ್ಯೋಗವಾಗಿಸಿಕೊಂಡು ಬೇಟೆ ಸಿಕ್ಕಾಗ ಅದನ್ನು ತನ್ನ ಮನೆಗೆ ತಂದು ಸುಟ್ಟು ತಿಂದು

---

೭. ಜೀ.ಶಂ.ಪ., ಹೊನ್ನಬಿತ್ತೇವು ಹೊಲಕೆಲ್ಲ, ಪು. ೩೯.
೮. Encyclopaedia of Britanica, p. 448.
೯. ಜನಪದ ಸಾಹಿತ್ಯದ ಮೂಲತತ್ವಗಳು, ಆರ್. ವಿ. ಎಸ್. ಸುಂದರಂ, ಪು.೧೪.
೧೦. ಜಾನಪದ ಅಧ್ಯಯನ, ದೇಜಗೌ, ಪು.೧೦.

ಸಂತೋಷದಿಂದ ಕುಣಿದು ಕುಪ್ಪಳಿಸಿ, ಹಾರಾಡುತ್ತ, ಓಡಾಡುತ್ತ ಹಾಡಿ ಬಳಸಿದ ಆ ಮಾತುಗಳೇ ಲಯಬದ್ಧವಾಗಿ ಕ್ರಿಯೆಯಲ್ಲಿ ಬಂದ ಧ್ವನಿಯೇ ಗೀತೆಗಳಾಗಿ ನಿಂತಿವೆ. ಇಂತಹ ಲಯಾತ್ಮಕ ಮಾತುಗಳೇ ಮುಂದೆ ಪರಿವರ್ತನೆಯಾಗಿ ಹಾಡುಗಳಾಗಿವೆ.'' ಅಂದಿನ ಮಾನವ ತನ್ನ ಸುಖ-ದುಃಖಗಳನ್ನು ಅತಿಮಾನುಷ ಶಕ್ತಿಗಳಿಗೆ ಹೇಳಿಕೊಳ್ಳುವಾಗಲೂ, ಗೀತೆಗಳು ಉಗಮವಾಗಿರಬೇಕು, ಎಂದರೆ ಕೆಲಸದ ಹಾಡುಗಳು, ಪರಮಾರ್ಥ ಗೀತೆಗಳು ಒಂದೇ ಕಾಲದಲ್ಲಿ ಉಗಮವಾದವೆಂದು ಹೇಳುವುದಾದರೂ ಅತಿಮಾನುಷ ಶಕ್ತಿಗಳಿಗೆ ಎಂಬ ಭಾವನೆ ಮಾನವನಿಗೆ ಉಂಟಾಗುವ ಮೊದಲೇ ಜನಪದ ಗೀತೆಯ ಪ್ರಾಥಮಿಕ ರೂಪ ಉಗಮವಾಗಿರಬೇಕು.''[೧೧] ಹಾಗೆಯೇ ''ಮಾನವನ ಭಾವೋತ್ಕರ್ಷದ ಮತ್ತು ಸಹಜ ಚಟುವಟಿಕೆಗಳ ಪರಿಣಾಮವಾಗಿ ಗೀತೆಗಳು ಉದಯವಾಗಿರಬಹುದು. ಅವನ ಅನುಭವಕೋಶ ಹಿಗ್ಗಿ ಜ್ಞಾನ ಪ್ರಪಂಚ ವಿಶಾಲವಾದಂತೆಲ್ಲಾ ಅವುಗಳ ಗುಣಗಾತ್ರ-ವೈವಿಧ್ಯಗಳು ವೃದ್ಧಿಹೊಂದಿದವು.''[೧೨] ಎಂಬ ಅಭಿಪ್ರಾಯಗಳು ಇದಕ್ಕೆ ಪೂರಕವಾಗಿವೆ.

ಜನಪದ ಸಾಹಿತ್ಯದಲ್ಲಿ ಕ್ರಿಯಾತ್ಮಕ ಜನಪದ ಗೀತೆಗಳು ಒಂದು ವಿಶಿಷ್ಟ ಪ್ರಕಾರಗಳಾಗಿವೆ. ಭಾಷೆ ಲಿಪಿಯನ್ನು ರೂಪಿಸಿಕೊಳ್ಳುವುದಕ್ಕಿಂತ ಪೂರ್ವದಿಂದಲೇ ಆದಿಮಾನವ ಸಮೂಹಗಳು ತಮ್ಮ ಭಾವನೆಗಳನ್ನು ಶಾಬ್ದಿಕ ರೂಪದಲ್ಲಿ ಅಭಿವ್ಯಕ್ತಿಗೊಳಿಸುತ್ತ ಬಂದರು. ತಮಗೆ ಉಂಟಾದ ಸುಖ-ದುಃಖವನ್ನೋ, ಅದ್ಭುತ ಆಶ್ಚರ್ಯವನ್ನೋ, ಸೋಲು-ಗೆಲುವನ್ನೋ ಕುಣಿತದಲ್ಲಿ ಹಾಡುಗಳಲ್ಲಿ ಮೂರ್ತಗೊಳಿಸಿದರು. 'ಹಳ್ಳಿಯ ಹಾಡು' ಎಂದು ಕರೆಯಲ್ಪಡುವ ಜನಪದ ಗೀತೆಗಳೂ, ನಾಗರಿಕತೆ ಬೆಳೆಯುತ್ತ ಬಂದು ಭಾಷೆಗೆ ಲಿಪಿ ಪ್ರಾಪ್ತವಾಗಿ ಶಿಷ್ಟಪದ ಸಾಹಿತ್ಯ ಸೃಷ್ಟಿಗೊಳ್ಳುತ್ತ ಬಂದರೂ ಬೆಟ್ಟದ ತೊರೆಯಂತೆ ಕಾಡಿನ ಹೂವಿನಂತೆ ತಮ್ಮ ಪಾಡಿಗೇ ತಾವು ಹರಿಯುತ್ತಲೇ ಬಂದವು; ಅರಳುತ್ತಲೇ ನಡೆದವು. ವಿಶಿಷ್ಟ ಭೌಗೋಳಿಕ ಪರಿಸರದಲ್ಲಿ ಗುಂಪುಗುಂಪಾಗಿ ಬಾಳುತ್ತಿದ್ದ ಆದಿಮಾನವ ಗುಂಪುಗಳಿಂದ ಜನಪದ ಗೀತೆಗಳು ಸೃಷ್ಟಿಗೊಂಡವು. ''ಸಂಗೀತ ಮತ್ತು ಸಾಹಿತ್ಯಗಳೆರಡನ್ನೂ ಕೂಡಿಯೇ ಹೊರಹೊಮ್ಮಿದ ಶರೀರ ಅವುಗಳದ್ದು''[೧೩] ಎಂದು ಜನಪದ ಗೀತೆಗಳನ್ನು ಕುರಿತು ಶಿವರಾಮ ಕಾರಂತರ ಮಾತು ಜನಪದ ಗೀತೆಗಳ ಹುಟ್ಟಿನ ಪರಿಸರದತ್ತ ಬೆರಳು ಮಾಡುತ್ತವೆ. ಜನಪದ ಪರಿಸರದಿಂದ ಬೇರ್ಪಡಿಸಿ ಜನಪದ ಗೀತೆಗಳನ್ನು ಕುರಿತು ಮಾಡುವ ವಿವೇಚನೆ ಒಂದು

---

೧೧. ಜನಪದ ಸಾಹಿತ್ಯದ ಮೂಲತತ್ವಗಳು, ಆರ್. ವಿ. ಎಸ್. ಸುಂದರಂ, ಪು.೧೫.
೧೨. ವಿನೀತ ರಾಮಚಂದ್ರರಾಯರು, ಹಳ್ಳಿಯಹಾಡು.
೧೩. ಶಿವರಾಮ ಕಾರಂತ : ಜಾನಪದ ಗೀತೆಗಳು, ಪು.೮.

ಬಳ್ಳಿಯಿಂದ ಬಿಡಿಸಿ ತಂದ ಹೂವು, ಕಡಲ ದಂಡೆಯಿಂದ ಎತ್ತಿ ತಂದ ಕಪ್ಪೆಚಿಪ್ಪುಗಳನ್ನು ಕುರಿತು ನೀಡುವ ವಿವರಣೆಯಾಗುತ್ತವೆ ಅಷ್ಟೆ. ಜನಪದ ಹಾಡುಗಳ ಹುಟ್ಟಿನ ವಿಶಿಷ್ಟ ಗುಣವೇ ಇದಕ್ಕೆ ಕಾರಣವಾಗಿದೆ. ಈ ವಿಭಿನ್ನ ಜನಪದ ಗುಂಪುಗಳನ್ನು ಮತ್ತು ಜನಪದ ಗೀತೆಗಳನ್ನು ಬೇರೆ ಬೇರೆಯಾಗಿ ಕಾಣುವುದು ಸಮಂಜಸವಲ್ಲ. ಜನಪದ ಗುಂಪುಗಳೇ ಜನಪದ ಗೀತೆಗಳ ಆಕರ. ಜನಪದ ಗೀತೆಗಳ ಸೃಷ್ಟಿಕರ್ತರು ಜನ ಪರದರೇ ಆಗಿದ್ದಾರೆ. ಮುಂದೆ ಇಂತಹ ಹಾಡುಗಳೇ ಅಂದರೆ ಹಂತಿಹಾಡು, ಬೀಸುವ, ಕುಟ್ಟುವ ಹಾಡುಗಳು ತಮ್ಮ ಸುತ್ತಲಿನ ಪ್ರಕೃತಿಯ ನಿರಂತರ ನಡೆಯುತ್ತಿರುವ ವ್ಯಾಪಾರಗಳು, ದೈಹಿಕಶ್ರಮ ಜನಪದರ ತೆರೆದ ಮನಸ್ಸಿನ ಮೇಲೆ ದಟ್ಟವಾದ ಪರಿಣಾಮ ಬೀರಿ ಅವರ ಕಾರ್ಯ ಚಟುವಟಿಕೆಗಳಲ್ಲಿ ನೇರವಾಗಿ ಪಾತ್ರವಹಿಸುತ್ತ ಬಂದವು.

ಈ ಎಲ್ಲ ಕ್ರಿಯೆಗಳಲ್ಲಿ ಸುಪ್ತವಾಗಿರಬಹುದಾದ ಶಕ್ತಿಗಳ ವಿಷಯವಾಗಿ ಭಯ, ಭಕ್ತಿಗಳನ್ನು ತಾಳಿ, ಉದ್ವೇಗ ಆವೇಶಗಳ ಅಬ್ಬರಗಳನ್ನೇ ಉಸಿರಾಡಿಸಿ, ರಕ್ತಸಂಚಾರ ತೀವ್ರಗೊಂಡು, ಸಂದರ್ಭಕ್ಕೆ ತಕ್ಕಂತೆ ಕುಣಿದು ಹಾಡಿದರು-ಹಾಡುತ್ತ ಕುಣಿದರು. ಬೀಸುತ್ತ, ಕುಟ್ಟುತ್ತ ತಮ್ಮ ಅನುಭವಗಳ ಅಕ್ಷಯಪಾತ್ರೆಗೆ ಹಾಡಿನ ರೂಪಕೊಟ್ಟರು. ಭಾವಪರವಶತೆಯಿಂದಾಗಿ ಸಹಜಸ್ಫುರಣಗೊಳ್ಳುವ ಜನಪದ ಗೀತೆಗಳನ್ನು ಕುರಿತು ''ಮಾನವನ ಭಾವೋತ್ಕರ್ಷದ ಮತ್ತು ಸಹಜ ಚಟುವಟಿಕೆಗಳ ಪರಿಣಾಮವಾಗಿ ಗೀತೆಗಳು ಉದಯವಾದುವೆನ್ನಬಹುದು. ಅವನ ಅನುಭವಕೋಶ ಹಿಗ್ಗಿ, ಜ್ಞಾನ ಪ್ರಪಂಚ ವಿಶಾಲವಾದಂತೆಲ್ಲಾ ಅವುಗಳ ಗುಣ, ಗಾತ್ರ, ವೈವಿಧ್ಯಗಳು ಅಸೀಮವಾಗಿ ವೃದ್ಧಿ ಹೊಂದಿದವು''[೧೪] ಎಂಬ ದೇಜಗೌ ಅವರ ಮಾತು ಜನಪದ ಗೀತೆಗಳ ಜನನದ ವೈಖರಿಯನ್ನು ಸ್ಪಷ್ಟಪಡಿಸುತ್ತದೆ.

ಈ ನಿಟ್ಟಿನಲ್ಲಿ ಭಾವೋತ್ಕರ್ಷ ಮತ್ತು ಸಹಜ ಚಟುವಟಿಕೆಗಳ ಪರಿಣಾಮವಾಗಿ ಹುಟ್ಟಿಕೊಂಡ ಕ್ರಿಯಾತ್ಮಕ ಜನಪದ ಗೀತೆಗಳ ಸ್ವರೂಪವನ್ನು ತಿಳಿದುಕೊಳ್ಳುವುದು ಇನ್ನೂ ಅಗತ್ಯವಾಗಿದೆ.

ನಮ್ಮಲ್ಲಿ ಇಂದಿಗೂ ಕೃಷಿಯೇ ಪ್ರಧಾನವಾದ ಜೀವನಾಧಾರ ಕ್ರಿಯೆ ಆದಿ ಮಾನವರ ಜೀವನದ ಸ್ವರೂಪವು ಅತಿ ದಟ್ಟವಾದ ಕೃಷಿ ಮತ್ತು ಅದರ ಸಹಜರಿ ಕ್ರಿಯೆಗಳ ಪರಿಸರವಾಗಿತ್ತು. ಹೀಗಾಗಿ ಅಂದಿನ ಅವರ ಅನೇಕ ಕ್ರಿಯೆಗಳು ನಮ್ಮ ನಾಡಿನ ವಿಭಿನ್ನ ಭೌಗೋಳಿಕ ಸ್ವರೂಪ ರಚನೆಗೆ ಅನುಗುಣವಾಗಿ ಭಿನ್ನಭಿನ್ನವಾಗಿದ್ದರೂ ಅವುಗಳೆಲ್ಲ ಕೃಷಿಪ್ರಧಾನವಾಗಿಯೇ ರೂಪುಗೊಂಡಿದ್ದುವು ಎನ್ನುವುದು ಸಹಜವಾಗಿದೆ. ಬಯಲು ಸೀಮೆಯವರು ಜೋಳ, ಗೋದಿ ಬೆಳೆದು, ಹಂತಿ ತಿರುಗಿಸಿ ಕಣ ಮಾಡಿ ಒಕ್ಕಿದರೆ, ಒಮ್ಮೊಮ್ಮೆ ಇತರ

---

೧೪. ದೇ. ಜವರೆಗೌಡ, ಜನಪದ ಗೀತಾಂಜಲಿ, ಪೀಠಿಕೆ, ಪು. ೨, ೧೯೭೮.

ದವಸ-ಧಾನ್ಯಗಳನ್ನು ಕುಟ್ಟಿ ಬೀಸಿದರೆ, ಮಲೆನಾಡು ಕರಾವಳಿ ಪ್ರದೇಶದ ಜನಪದರು ಭತ್ತ ಕುಟ್ಟುವುದು, ತೆಂಗಿನಮರ ಏರಿ ಕಾಯಿ ಇಳಿಸುವುದು, ಮೀನು ಹಿಡಿಯಲು ಹೊಳೆಯಲ್ಲೋ, ಕಡಲಿನಲ್ಲೋ ದೋಣಿ ಹಾಕಿ ದೂರ ಹೋಗುವುದು ಹೀಗೆ ಈ ಎಲ್ಲ ಕ್ರಿಯೆಗಳಲ್ಲಿ ನಿರತರಾದ ಜನ ಕಾರ್ಯ ಮಾಡುತ್ತ ಮಾಡುತ್ತ ಬೇಸರಿಕೆ ಆಯಾಸಗಳನ್ನು ಇಂಗಿಸಿಕೊಳ್ಳಲು ಮಾಡುವ ಕೆಲಸದ ಜೊತೆಗೆ ಹಾಡುಗಳನ್ನು ಹಾಡಿದರು. ಅವರು ಕೈಕೊಂಡ ''ಕ್ರಿಯೆಗೂ, ಗೀತೆಗೂ ಸಾವಯವ ಸಂಬಂಧವೊದಗಿತು. ಗೀತಗಳೆಲ್ಲ ಕ್ರಿಯಾರ್ತಕವಾದವು. ಕ್ರಿಯೆಗೆ ಗೀತ ಬೋಧಕವಾದರೆ ಗೀತ ಸೃಷ್ಟಿಗೆ ಕ್ರಿಯೆಯಿಂದ ಸ್ಫೂರ್ತಿ ದೊರೆಯುವಂತಾಯಿತು.''[೧೫] ದೇ ಜವರೆಗೌಡ ಅವರು ಹೇಳುವ ಈ ಮಾತುಗಳಿಗೆ ಜನಪದ ಹಾಡುಗಳಿಗೂ ಹಾಗೂ ಜನಪದರು ಕೈಗೊಳ್ಳುವ ಕ್ರಿಯೆಗಳಿಗೂ ಇರುವ ಅವಿನಾಭಾವ ಸಂಬಂಧವನ್ನು ಸ್ಪಷ್ಟಪಡಿಸುತ್ತವೆ.

''ಜನಪದ ಗೀತೆ ಮುಖ್ಯವಾಗಿ ''ಕ್ರಿಯಾತ್ಮಕ ಸ್ವರೂಪದ್ದು ಎನ್ನುವದು ಒಂದು ಮಹತ್ವದ ಸಂಗತಿ''[೧೬] ಹಾಗಾದರೆ ಈ ಕ್ರಿಯೆಗಳಲ್ಲಿ ಮನುಷ್ಯ ಕೈಕೊಳ್ಳುವ ಎಲ್ಲ ಕೆಲಸ ಕಾರ್ಯಗಳನ್ನು ಹಾಡಿನ ಹುಟ್ಟಿಗೆ ಅನ್ವಯಿಸಲು ಸಾಧ್ಯವೆ? ಎಂದಾಗ ''ಜನಪದ ಗೀತೆಗಳು ಮುಖ್ಯವಾಗಿ ಕರ್ಮಗೀತೆಗಳು, ಅಂದರೆ ಕೆಲಸ ಮಾಡುತ್ತಾ ಹೇಳುವ ಹಾಡುಗಳು''[೧೭] ಕುಟ್ಟುವದು, ಬೀಸುವುದು, ಸಸಿನೆಡುವುದು, ಕಳೆಕೀಳುವುದು, ಬಂಡಿಹೊಡೆಯುವುದು ಮುಂತಾದವನ್ನು 'ಕೆಲಸ' ಮಾಡುವುದು ಎಂದು ಹೇಳುವದು ಸೂಕ್ತವಾಗಿದೆ.

ಹೀಗಿರುವಾಗ ಕ್ರಿಯಾತ್ಮಕ ಬಗೆಗಳಲ್ಲಿ ಸಂಬಂಧಿಸಿದ ಜಾನಪದ ವಿಷಯಗಳಲ್ಲಿ ಹಬ್ಬ-ಹರಿದಿನ, ಜಾತ್ರೆ-ಉತ್ಸವ, ಸಂಗೀತ-ನೃತ್ಯ, ಕ್ರೀಡೆ, ಸಂಪ್ರದಾಯ ಪದ್ಧತಿ, ಆಚರಣೆಗಳು, ನಾಟಕ, ಜನಪದ ಕಲೆಗಳು, ಶಿಲ್ಪ ಚಿತ್ರಕಲೆ ಅಲ್ಲದೆ ಪಾಕ ವಿಧಾನ ಇತ್ಯಾದಿಗಳೆಲ್ಲವು ಕ್ರಿಯಾತ್ಮಕ ಜಾನಪದಕ್ಕೆ ಒಳಗೊಳ್ಳುವ ಪ್ರಕಾರಗಳಾಗಿವೆ. ಆದರೆ ವಿಶಾಲವಾದ ಈ ಜಾನಪದ ಕ್ಷೇತ್ರದಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಕೃಷಿಗೆ ಸಂಬಂಧಿಸಿದ ಕ್ರಿಯಾತ್ಮಕ ಜನಪದ ಗೀತೆಗಳ ಸ್ಥೂಲವಾದ ವಿಂಗಡಣೆಯ ಹಿನ್ನೆಲೆಯಲ್ಲಿ ಕ್ರಿಯಾತ್ಮಕ ಜನಪದಗೀತೆಗಳನ್ನು ಪರಿಚಯಿಸಲಾಗಿದೆ.

---

೧೫. ದೇ. ಜವರೆಗೌಡ, ಜನಪದ ಗೀತಾಂಜಲಿ, ಪೀಠಿಕೆ, ಪು. ೨, ೧೯೭೮.
೧೬. ಸಿ.ಪಿ.ಕೆ. ಜಾನಪದ ಸರಸ್ವತಿ, ಪು. ೧೦೨, ೧೯೭೩.
೧೭. ಮತಿಘಟ್ಟ ಕೃಷ್ಣಮೂರ್ತಿ, ಕನ್ನಡ ಜಾನಪದ ಸಾಹಿತ್ಯ ಭಂಡಾರ, ಪು.೪೫, ೧೯೭೫.